ಪಿ ಡಬ್ಲು 2

ಸಾಕ್ಷಿಯನ್ನು ಕರೆಸಿ ಪ್ರಮಾಣಿಕರೀಸಲಾಯಿತು.

ದಿನಾಂಕಃ 01-04-2022.

**ಪಾಟೀಸವಾಲುಃ 1,2,13 ಹಾಗೂ 15 ನೇ ಪ್ರತಿವಾದಿಗಳ ಪರ ಶ್ರೀ ಜೆ.ಡಿ.ಬಿ. ವಕೀಲರಿಂದ,**

ಈ ದಾವೆಯನ್ನು ಸಲ್ಲಿಸಲು ನಾವು ಎಲ್ಲಾ ವಾದಿಯರು ಒಟ್ಟಿಗೇ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇವೆ. 1 ನೇ ವಾದಿ ಈ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದು ಆ ಬಗ್ಗೆ ನನಗೆ ಗೊತ್ತಿದೆ. 1 ನೇ ವಾದಿ ಈ ನ್ಯಾಯಾಲಯದಲ್ಲಿ ಕೊಟ್ಟ ಹೇಳಿಕೆ ಸರಿ ಇರುತ್ತದೆ. ಈ ದಾವೆಯಲ್ಲಿ ದಾವಾ ಸೊತ್ತುಗಳನ್ನು ಅ, ಬ ಹಾಗೂ ಕ ಎಂದು ತೋರಿಸಲಾಗಿದ್ದು ಪ್ರತಿ ಒಂದೂ ಶೆಡ್ಯೂಲನಲ್ಲಿ ಯಾವ ಯಾವ ಸರ್ವೆ ನಂಬರುಗಳು ಬರುತ್ತವೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ದಾವಾ ಅ ಸೊತ್ತು ಸರ್ವೆ ನಂ.680/2 ಭೂ ನ್ಯಾಯ ಮಂಡಳಿಯಲ್ಲಿ ಮಂಜೂರಾಗಿದ್ದು ಅದು ಬೋಡಾ ಯಾನೆ ಈರ ಅಂದರೆ ನಮ್ಮ ಅಜ್ಜನಿಗೆ ಮಂಜೂರಾಗಿರುತ್ತದೆ. ದಾವಾ ಅ ಸೊತ್ತು ಮಂಜೂರಾದ ಬಗ್ಗೆ ದಾಖಲೆಗಳನ್ನು ಇಲ್ಲಿ ಹಾಜರು ಮಾಡಿರುತ್ತೇವೆ. ಸಾಕ್ಷಿಗೆ ಭೂ ನ್ಯಾಯ ಮಂಡಳಿಯ ಆದೇಶ ಹಾಗೂ ಫಾರಂ ನಂ.10 ನ ದೃಢೀಕೃತ ನಕಲುಗಳನ್ನು ಹಾಜರು ಮಾಡಿದ್ದು ಸಾಕ್ಷಿಯು ಅವುಗಳು ದಾವಾ ಅ ಶೆಡ್ಯೂಲ ಸೊತ್ತಿಗೆ ಸೇರಿದವುಗಳು ಆಗಿದ್ದರಿಂದ ಅವುಗಳನ್ನು ಕ್ರಮವಾಗಿ ನಿಡಿ-1 ಹಗೂ ನಿಡಿ-2 ಎಂದು ಗುರುತಿಸಲಾಯಿತು. ನಿಡಿ-1 ಹಾಗೂ ನಿಡಿ-2 ರ ಪ್ರಕಾರ ಭೂ ನ್ಯಾಯ ಮಂಡಳಿಯಲ್ಲಿ ನಮ್ಮ ತಂದೆ ಸೋಮಯ್ಯ ಹಾಗೂ ಚಿಕ್ಕಪ್ಪ ದುರ್ಗಪ್ಪನಿಗೆ ದಾವಾ ಅ ಶೆಡ್ಯೂಲ ಸೊತ್ತು ಜಂಟಿಯಾಗಿ ಮಂಜೂರಾಗಿರುತ್ತದೆ ಎಂದರೆ ನಿಜ. ಸಾಕ್ಷಿಯು ಮುಂದುವರಿದು ಸದ್ರಿ ಸೊತ್ತು ನಮ್ಮ ಪಿತ್ರಾರ್ಜಿತ ಆಸ್ತಿಯಾಗಿದ್ದು ಆ ರೀತಿ ಜಂಟಿಯಾಗಿ ಮಂಜೂರಾಗಿರುತ್ತವೆ ಎಂದು ಹೇಳುತ್ತಾರೆ. ದಾವಾ ಅ ಶೆಡ್ಯೂಲ ಸೊತ್ತಿನ ಭೂ ನ್ಯಾಯ ಮಂಡಳಿಯ ಆದೇಶವನ್ನು ನಾವು ನೋಡಿ ನಮ್ಮ ವಕೀಲರಿಗೆ ಕೊಟ್ಟಿರುತ್ತೇವೆ. ದಾವಾ ಅ ಶೆಡ್ಯೂಲ ಸೊತ್ತು ನಮ್ಮ ತಂದೆ ಹಾಗೂ ಚಿಕ್ಕಪ್ಪನಿಗೆ ಮಂಜೂರಾದ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿರುತ್ತೇವೆ. ನಿಪಿ-3 ಹಾಗೂ ನಿಪಿ-4 ರಲ್ಲಿ ಬೋಡಾ ಯಾನೆ ಈರ ಎಂದು ಇರುವುದು ನಮ್ಮ ಅಜ್ಜನಾಗಿದ್ದು ನಿಪಿ-3 ಹಾಗೂ ನಿಪಿ-4 ರಲ್ಲಿ ಇರುವ ಆಸ್ತಿಗಳು ನಮ್ಮ ಅಜ್ಜನಿಗೆ ಮಂಜೂರಾಗಿರುತ್ತವೆ.

ನಮ್ಮ ಅಜ್ಜ ತನ್ನ ಹೆಸರಿಗೆ ಇದ್ದ ಎಲ್ಲಾ ಗೇಣಿ ಭೂಮಿಗಳ ಮಂಜೂರಾತಿಗಾಗಿ ದಾವಾ ಭೂನ್ಯಾಯ ಮಂಡಳಿಯ ಮುಂದೆ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನಿಜ. ನಮ್ಮ ಅಜ್ಜನ ಹೆಸರಿಗೆ ಮಂಜೂರಾದ ಎಲ್ಲಾ ಆಸ್ತಿಗಳು ನಮ್ಮ ಅಜ್ಜನ ಗೇಣಿ ಆಸ್ತಿಗಳು ಎಂದರೆ ನಿಜ. ನಮ್ಮ ತಂದೆ ಹಾಗೂ ಚಿಕ್ಕಪ್ಪನ ಹೆಸರಿಗೆ ಜಂಟಿಯಾಗಿ ದಾವಾ ಅ ಶೆಡ್ಯೂಲ ಸೊತ್ತು ಮಂಜೂರಾದಾಗ ನಮ್ಮ ಅಜ್ಜ ಜೀವಂತ ಇದ್ದರು. ಎಲ್ಲಾ ದಾವಾ ಸೊತ್ತುಗಳು ಈಗಲೂ ಸಹ ನಮ್ಮ ತಂದೆ ಹಾಗೂ ಚಿಕ್ಕಪ್ಪ ಇವರುಗಳ ಹೆಸರಿಗೆ ಇದ್ದು ಸರ್ವೆ ನಂ.680/2 ರ 32 ಗುಂಟೆ ಮಾತ್ರ 2 ನೇ ಪ್ರತಿವಾದಿಯ

ಹೆಸರಿನಲ್ಲಿ ಇರುತ್ತದೆ. ಸಾಕ್ಷಿಯು ಮುಂದುವರಿದು ನಮ್ಮ ತಂದೆಗೆ ಮೋಸ ಮಾಡಿ ಆ ರೀತಿ ಖಾತೆ ಮಾಡಿಸಿಕೊಳ್ಳಲಾಗಿದೆ ಎಂದು ಹೇಳುತ್ತಾರೆ. ನಮ್ಮ ತಂದೆ 2 ನೇ ಪ್ರತಿವಾದಿಗೆ ದಾನ ಪತ್ರ ಬರೆದುಕೊಟ್ಟಿರುವುದನ್ನು ನಂತರ ಉಪನೋಂದಾವಣಾಧಿಕಾರಿಗಳ ಕಚೇರಿಯಲ್ಲಿ ತೆಗೆಸಿ ನೋಡಿರುತ್ತೇವೆ. ಸದ್ರಿ ದಾನ ಪತ್ರದಲ್ಲಿ ನಮ್ಮ ತಂದೆಯ ಫೋಟೋ ಹಾಗೂ ಹೆಬ್ಬೆಟ್ಟು ಇವೆ. ಸದ್ರಿ ದಾನ ಪತ್ರ ನೋಂದಣಿಯಾಗಿದೆ. ನಮ್ಮ ತಂದೆಯ ಹೆಸರಿಗೆ ಇದ್ದ ಜಮೀನನ್ನು ನಮ್ಮ ತಂದೆಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ದಿ.16-12-2014 ರಂದು ತೀರಿಕೊಂಡಿರುತ್ತಾರೆ. ನಮ್ಮ ತಂದೆ ಸಾಯುವ ಪೂರ್ವದಲ್ಲಿ ಮಾನಸಿಕವಾಗಿ ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಗೆ 2005 ರಲ್ಲಿ ಪಾರ್ಶ್ವವಾಯು ಆಗಿದ್ದು ನಂತರ ಅವರಿಗೆ ಆಯುರ್ವೇದಿಕ್ ಚಿಕಿತ್ಸೆ ಕೊಡಿಸಿದ್ದೆವು. ನಮ್ಮ ತಂದೆ ತನ್ನ ಸ್ವಂತ ಬಲದಿಂದ ಓಡಾಡುತ್ತಿರಲಿಲ್ಲ. 2005 ರಿಂದ 2012 ರವರೆಗೆ ನಮ್ಮ ತಂದೆ ನನ್ನ ಜೊತೆಗೆ ನನ್ನ ಮನೆಯಲ್ಲಿ ಇದ್ದು ನಂತರ 2013 ರಲ್ಲಿ ನನ್ನ ಅಣ್ಣ 1 ನೇ ಪ್ರತಿವಾದಿ ನಮ್ಮ ತಂದೆಯನ್ನು ತನ್ನ ಮನೆಗೆ ಕರೆದುಕೊಂಡು ಹೋಗಿದ್ದನು. 2005 ರಲ್ಲಿ ಪಾರ್ಶವಾಯು ಆದ ನಂತರ ಪ್ರಾರಂಭದಲ್ಲಿ ಆಯುರ್ವೇದಿಕ್ ಚಿಕಿತ್ಸೆ ಕೊಡಿಸಲಾಗಿದ್ದು ನಂತರ ಅವರಿಗೆ ಯಾವುದೇ ಚಿಕಿತ್ಸೆಯನ್ನು ಕೊಡಿಸಲಿಲ್ಲ. ನಮ್ಮ ತಂದೆಗೆ ಚಿಕಿತ್ಸೆ ಕೊಡಿಸಿದ ಬಗ್ಗೆ ಧರ್ಮಸ್ಥಳದ ಆಯುರ್ವೇದಿಕ್ ಆಸ್ಪತ್ರೆಯಲ್ಲಿ ದಾಖಲೆ ಕೇಳಿದ್ದು ಅವರು ಈಗ ಕೊಡಲು ಆಗುವುದಿಲ್ಲ ಮುಂದೆ ಬನ್ನಿ ಎಂದು ಹೇಳಿ ಕಳುಹಿಸಿದ್ದರು. ನಮ್ಮ ತಂದೆಗೆ ಯಾವುದೇ ಪಾರ್ಶವಾಯು ಆಗಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಸಾಯುವವರೆಗೂ ಸಹ ಸಂಪೂರ್ಣವಾಗಿ ಆರೋಗ್ಯದಿಂದ ಇದ್ದರು ಹಾಗೂ ಅವರು ಮಾನಸಿಕವಾಗಿಯೂ ಸಹ ಚೆನ್ನಾಗಿ ಇದ್ದರು ಎಂದರೆ ಸರಿಯಲ್ಲ. ದಾವಾ ಅ ಶೆಡ್ಯೂಲ ಆಸ್ತಿಯಲ್ಲಿನ ದುರ್ಗಪ್ಪನ ಅರ್ಧ ಸೊತ್ತನ್ನು ಮಾರಾಟ ಮಾಡಲಾಗಿದೆ. ನಮ್ಮ ತಂದೆ ಸದ್ರಿ ಕ್ರಯ ಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ತಾನು ದಾನ ಪತ್ರ ಮಾಡಿಕೊಟ್ಟ ದಿನವೇ ದುರ್ಗಪ್ಪನ ಹಿಸ್ಸೆಯನ್ನು ಅದೇ ದಿವಸ ಮಾರಾಟ ಮಾಡಿದ್ದು ನಮ್ಮ ತಂದೆ ಸದ್ರಿ ಕ್ರಯ ಪತ್ರಕೆ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ಕ್ರಯ ಪತ್ರದ ದೃಢೀಕೃತ ನಕಲನ್ನು ನಮ್ಮ ವಕೀಲರಿಗೆ ನಾವೇ ಕೊಟ್ಟಿರುತ್ತೇವೆ. ನಿಪಿ-2 ರಲ್ಲಿ ನಮ್ಮ ತಂದೆಯವರ ಫೋಟೋ ಇದೆ ಅಂದರೆ ಸಾಕ್ಷಿಯು ನಿಪಿ-2 ನ್ನು ನೋಡಿ ಅಲ್ಲಿರುವ ಫೋಟೋ ನಮ್ಮ ತಂದೆಯ ಫೋಟೋ ಆಗಿರುತ್ತದೆ ಎಂದು ಹೇಳುತ್ತಾರೆ.

ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.